30

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಮೋಟಾರು-ರಹಿತ ಸಾರಿಗೆ ಸಂಸ್ಥೆ (KNMTA) ಯನ್ನು ಸ್ಥಾಪಿಸುವ ಕುರಿತು.

ಓದಲಾಗಿದೆ:1 ಸರ್ಕಾರದ ಆದೇಶ ಸಂಖ್ಯೆ: ನಅಇ 237 ಪಿಆರ್‌ಜೆ 2017 ಬೆಂಗಳೂರು ದಿನಾಂಕ: 24-10-2017

2 ಆಯುಕ್ತರು, ನಗರ ಭೂ ಸಾರಿಗೆ ನಿರ್ದೇಶನಾಲಯದ ಏಕ ಕಡತ ಸಂಖ್ಯೆ: DULT /33/ PBS-Bangalore/ GEN/ 2017-18.

*** <> ***

**ಪ್ರಸ್ತಾವನೆ:-**

ಮೆಟ್ರೊ ನಿಲ್ದಾಣಗಳಿಗೆ ಮತ್ತು ಇತರೆ ಸಾರ್ವಜನಿಕ ಸಾರಿಗೆ ಕ್ರಮಗಳಿಗೆ ಸುರಕ್ಷಿತ ಮತ್ತು ವಿಶ್ವಾಸಾರ್ಹ ಕೊನೆಯ ಮೈಲು ಸಂಪರ್ಕ ಕಲ್ಪಿಸುವ ದೃಷ್ಟಿಯಿಂದ ಸರ್ಕಾರವು 2017-18ರ ಆಯವ್ಯಯದಲ್ಲಿ ಸಾರ್ವಜನಿಕ ಬೈಸಿಕಲ್ ಬಳಕೆ (PBS) ವ್ಯವಸ್ಥೆಯನ್ನು ಬೆಂಗಳೂರು ನಗರದ ಆಯ್ದ ಸಮೂಹಗಳಲ್ಲಿ ಅನುಷ್ಠಾನಗೊಳಿಸಲು ಘೋಷಿಸಿ, ಮೇಲೆ (1) ಓದಲಾದ ಸರ್ಕಾರದ ಆದೇಶದಲ್ಲಿ ಸಾರ್ವಜನಿಕ ಬೈಸಿಕಲ್ ಬಳಕೆ ವ್ಯವಸ್ಥೆಯನ್ನು ಮೊದಲ ಹಂತದಲ್ಲಿ ಗುರುತಿಸಲಾದ ಸಮೂಹಗಳಲ್ಲಿನ ಪ್ರದೇಶಗಳಾದ ಎಂ.ಜಿ.ರಸ್ತೆ, ವಿಧಾನಸೌಧ, ಇಂದಿರಾನಗರ, ಬಾಣಸವಾಡಿ, ಹೆಚ್.ಆರ್.ಬಿ.ಆರ್. ಲೇಔಟ್, ಹೆಚ್.ಬಿ.ಆರ್. ಲೇಔಟ್, ಕಾಚರಕನಹಳ್ಳಿ, ಕೋರಮಂಗಲ, ಹೆಚ್.ಎಸ್.ಆರ್. ಲೇಔಟ್ ನಲ್ಲಿ ಅನುಷ್ಠಾನಗೊಳಿಸಲು ಅನುಮೋದನೆಯನ್ನು ನೀಡಿರುತ್ತಾರೆ. ಬೆಂಗಳೂರು ಸಾರ್ವಜನಿಕ ಸೈಕಲ್ ಬಳಕೆ ವ್ಯವಸ್ಥೆಯ ಯೋಜನೆ ಅನುಷ್ಠಾನಗೊಳಿಸಿ ಕಾರ್ಯಾಚರಣೆಗೆ ತರಲು ಹಾಗೂ ಜೊತೆಗೆ ಮೋಟಾರು ರಹಿತ ಸಾರಿಗೆಗಾಗಿ ಸುರಕ್ಷಿತ ಸೈಕಲ್ ಮಾರ್ಗಗಳನ್ನು ಸೃಷ್ಟಿಸಿ, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯಾಚರಣೆಗಳನ್ನು ಕೈಗೊಳ್ಳಲು, ಕರ್ನಾಟಕ ಸೊಸೈಟಿ ನೊಂದಾಯಿತ ಕಾಯ್ದೆ 1960 ರಡಿಯಲ್ಲಿ, ಸೊಸೈಟಿಯೊಂದನ್ನು ಸ್ಥಾಪಿಸಲು ಸಹ ಮಂಜೂರಾತಿ ನೀಡಲಾಗಿದೆ. ಸದರಿ ಸೊಸೈಟಿ ನಿರ್ವಹಣೆಗೆ 'ಎಕ್ಸಿಕ್ಯೂಟೀವ್ ಕೌನ್ಸಿಲ್' ಮತ್ತು 'ಗವರ್ನಿಂಗ್ ಕೌನ್ಸಿಲ್' ಒಳಗೊಂಡಿರುವಂತೆ ಅಗತ್ಯ ಚೌಕಟ್ಟನ್ನು ರಚಿಸಲು ಸಂಯೋಜಿಸಲು ಹಾಗೂ ಅವುಗಳ ಕಾರ್ಯವ್ಯಾಪ್ತಿಯನ್ನು ಸೂಚಿಸಲಾಗಿರುತ್ತದೆ

ಮೇಲೆ ಓದಲಾದ (2)ರ ಆಯುಕ್ತರು, ನಗರ ಭೂ ಸಾರಿಗೆ ನಿರ್ದೇಶನಾಲಯ ರವರ ಪ್ರಸ್ತಾವನೆಯಲ್ಲಿ, "ಕರ್ನಾಟಕ ಮೋಟಾರು-ರಹಿತ ಸಾರಿಗೆ ಸಂಸ್ಥೆ" (KNMTA) ಎಂಬ ಸೊಸೈಟಿಯನ್ನು ರಚನೆಗಾಗಿ ಕರ್ನಾಟಕ ಸೊಸೈಟಿಗಳ ನೊಂದಾಯಿತ ಕಾಯ್ದೆ 1960 ರಡಿಯಲ್ಲಿ ಸ್ಥಾಪಿಸಲು ಹಾಗೂ "ಮೆಮೊರ್‍ಯಾಂಡಮ್ ಆಫ್ ಅಸೋಸಿಯೇಷನ್" ಮತ್ತು "ರೂಲ್ಸ್ ಅಂಡ್ ರೆಗ್ಯೂಲೇಷನ್ಸ್" ಗಳಿಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಆಯುಕ್ತರು, ನಗರ ಭೂ ಸಾರಿಗೆ ನಿರ್ದೇಶನಾಲಯ ರವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 82 ಪಿಆರ್‌ಜೆ 2018,**
**ಬೆಂಗಳೂರು, ದಿನಾಂಕ:-27-02-2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸೊಸೈಟಿಗಳ ನೋಂದಾಯಿತ ಕಾಯ್ದೆ 1960 ರಡಿಯಲ್ಲಿ ತಕ್ಷಣ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ "ಕರ್ನಾಟಕ ಮೋಟಾರು-ರಹಿತ ಸಾರಿಗೆ ಸಂಸ್ಥೆ" (KNMTA) ಎಂಬ ಸೊಸೈಟಿಯನ್ನು ಸ್ಥಾಪಿಸಲು ಈ ಆದೇಶಕ್ಕೆ ಲಗತ್ತಿಸಿರುವ **ಅನುಬಂಧ-1** ಮತ್ತು **ಅನುಬಂಧ-2**ರಲ್ಲಿ ಅನುಕ್ರಮವಾಗಿ ನೀಡಿರುವ "ಮೆಮೊರ್‍ಯಾಂಡಮ್ ಆಫ್ ಅಸೋಸಿಯೇಷನ್" ಮತ್ತು "ರೂಲ್ಸ್ ಅಂಡ್ ರೆಗ್ಯೂಲೇಷನ್ಸ್" ಪ್ರಕಾರ ಅನುಮೋದನೆ ನೀಡಿ ಆದೇಶಿಸಿದೆ.

..2..

1561
01/03/18